**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮುಧೋಳ**

**(ಇಂದು ದಿನಾಂಕ 23.09.2025 ರಂದು ಸಾಕ್ಷಿದಾರರನ್ನು ಮಧ್ಯಂತರ ಅರ್ಜಿ ನಂ.06 ನೇದ್ದರ ಮೇಲೆ ಮಾಡಲಾದ ಆದೇಶದ ಪ್ರಕಾರ ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ 4 ಹಾಗೂ 5 ನೇ ಎದುರುದಾರ ಪರ ವಕೀಲರಾದ ಶ್ರೀಮತಿ.ಎಲ್ ಎಮ್ ಎಸ್**

1. ನನ್ನ ಮುಖ್ಯ ವಿಚಾರಣೆ ಪ್ರಮಾ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು ಬಿ ಎ ಪದವಿಧರ ಇದ್ದೇನೆ ಇಂಗ್ಲೀಷನಲ್ಲಿ ಸಹಿ ಮಾಡುತ್ತೇನೆ. ನಾನು ಈ ನ್ಯಾಯಾಲಯದ ಹೊರತಾಗಿ ಬೇರೆ ನ್ಯಾಯಾಲಯದಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿಲ್ಲ. ನಾನು ನನ್ನ ಪರವಾಗಿ ಇಲ್ಲದೇ ಈ ಅರ್ಜಿಯೊಂದಿಗೆ ಕೂಡಿಸಲ್ಪಟ್ಟ ಇತರ ಅರ್ಜಿಗಳ ಅರ್ಜಿದಾರರ ಪರವಾಗಿ ಸಾಕ್ಷ ನುಡಿಯುತ್ತಿದ್ದೇನೆ.

2. ಉಳಿದ ಪ್ರರಕರಣಗಳಲ್ಲಿಯ ಜಮೀನುಗಳು, ನಮ್ಮ ಜಮೀನು, ಅಕ್ಕ ಪಕ್ಕದಲ್ಲಿ ಇರುವುದರಿಂದ ಅವುಗಳ ಫಲವತ್ತತೆಯ ಬಗ್ಗೆ ನನಗೆ ಗೊತ್ತು. ನನಗೆ ಆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2016 ಕ್ಕಿಂತ ಹಿಂದಿನ ಖರೀದಿ ಪತ್ರಗಳನ್ನು ನಾನು ಹಾಜರು ಪಡೆಸಿಲ್ಲ. 2016 ಕ್ಕಿಂತ ಹಿಂದಿನ ಖರೀದಿ ಪತ್ರಗಳು ಹಾಜರುಪಡಿಸಿದಲ್ಲಿ ನಮ್ಮ ಜಮೀನಿನ ಬೆಲೆ ಕಡಿಮೆಯಾಗುವುದರಿಂದ ಸದರಿ ದಾಖಲೆಗಳನ್ನು ಹಾಜರು ಪಡೆಸಿಲ್ಲ ಎಂದರೆ ಸರಿಯಲ್ಲ. ನಾವು ಹೆಚ್ಚು ಪರಿಹಾರ ಪಡೆಯುವ ಉದ್ದೇಶ ಖೊಟ್ಟಿ ಖರೀದಿ ಪತ್ರಗಳನ್ನು ಸೃಷ್ಟಿ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

3. 1 ನೇ ಎದುರುದಾರರು ಸ್ಥಾನಿಕ ಚವಕಶಿ ಮಾಡಿ ಆ ಊರಿನ ಜಮೀನುಗಳ ಖರೀದಿ ಪತ್ರಗಳ ಆಧಾರದ ಮೇಲೆ ಸರಿಯಾದ ಬೆಲೆ ನಿರ್ಧರಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಜಮೀನು ಫಲವತಾ ಜಮೀನು ಇದ್ದು, ಕಬ್ಬು ಬೇಳೆ ಬೆಳೆಯುತ್ತಿದರಿಂದ ಹೆಚ್ಚು ಪರಿಹಾರ ಪಡೆಯುವ ಸಲುವಾಗಿ ದಾಖಲಿಸಿದ್ದೇವೆ. ಕಬ್ಬಿನ ಬಿಲ್ಲುಗಳನ್ನು ನಾನು ಹಾಜರು

ಪಡೆಸಿಲ್ಲ. ನಮ್ಮ ಜಮೀನು ಕಬ್ಬು ಬೆಳೆಯುವ ಜಮೀನು ಇತ್ತು ಅಂತಾ, ಹೆಚ್ಚು ಫಲವತ್ತಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-28 ರಲ್ಲಿಯ ಜಮೀನು ನಮ್ಮ ಜಮೀನಿಕ್ಕಿಂತ ಹೆಚ್ಚು ಫಲವತ್ತಾದ ಜಮೀನಗಳು ಇರುವುದರಿಂದ ಆ ಜಮೀನಿನ ಬೆಲೆ ನಮ್ಮ ಜಮೀನಿಗೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರ ಸೂಕ್ತ ಪರಿಹಾರ ನೀಡಿದ್ದರೂ ಕೂಡಾ ಹೆಚ್ಚು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆ ಹಾಜರು ಪಡೆಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದಂತೆ 1 ಹಾಗೂ 2 ನೇ ಎದುರುದಾರರ ಪರ ಎಸ್ ಜಿ ಸಿ ಅವರು ಮಾಡಿದ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ)

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

Sd/-

3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಮುಧೋಳ